## KARNATAKA LOKAYUKTA

No.UPLOK-2/DE.523/2018/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 19.04.2022.

## RECOMMENDATION

Sub:- Departmental inquiry against (1) Sri Sridhara Churi, the then Assistant Engineer, Rural Drinking Water Supply and Sanitation Sub-division, Nanjanagud, (2) Sri Ramakrishna,(now retired) the then Assistant Executive Engineer, Rural Drinking Water Supply and Sanitation Sub-division, Nanjanagud, (3) Sri M.K.Bhaskar, (now retired), the then Executive Engineer, Rural Drinking Water Supply and Sanitation Division, Mysuru, and (4) Sri Ramachandrappa, Panchayath Development Officer,Horaladi Grama panchayath, Nanjanagud Taluk – reg.

Ref:- 1) Government Order No.RDP 92 ENQ 2018 dated 16.11.2018.

2) Nomination order No. UPLOK-2/DE.523/2018 dated 30.11.2018 of Hon'ble Upalokayukta, State of Karnataka.

3) Inquiry report dated 13.04.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its order dated 16.11.2018 initiated the disciplinary proceedings against (1) Sri Sridhara Churi, the then
~~~~~~

Assistant Engineer, Rural Drinking Water Supply and Sanitation Sub-division, Nanjanagud, (2) Sri Ramakrishna,(now retired) the then Assistant Executive Engineer, Rural Drinking Water Supply and Sanitation Sub-division, Nanjanagud, (3) Sri M.K.Bhaskar, (now retired) the then Executive Engineer, Rural Drinking Water Supply and Sanitation Division, Mysuru, and (4) Sri Ramachandrappa, Panchayath Development Officer, Horaladi Grama panchayath, Nanjanagud Taluk, [hereinafter referred to as Delinquent Government Official, for short as 'DGOs 1 to 4' respectively ] and entrusted the Departmental Inquiry to this Institution.

2. This Institution by Nomination Order No. UPLOK-2/DE.523/2018 dated 30.11.2018 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them.

3. The DGOs were tried for the charge of illegally executing work of providing drinking water to Basaveshwaranagar which had low population, instead of providing drinking water to Hosuru Village, for which the amount was sanctioned and was having high population and thereby committing misconduct.

4. The Inquiry Officer (Additional Registrar of Enquiries-11) on proper appreciation of oral and documentary evidence has held that, the Disciplinary Authority has '*proved*' the above charge against the DGO 1 Sri Sridhara Churi, the then Assistant Engineer, DGO 2 Sri Ramakrishna,(now retired), the then Assistant Executive Engineer, DGO 3 Sri M.K.Bhaskar, (now retired) the then Executive Engineer, and DGO 4 Sri Ramachandrappa, Panchayath Development Officer, Horaladi Grama panchayath, Nanjanagud Taluk.

5. On re-consideration of report of inquiry and on perusal of the entire records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of DGOs furnished by the Enquiry Officer,

i) DGO 1 Sri Sridhara Churi, is due to retire from service on 31.07.2037.

ii) DGO 2 Sri Ramakrishna, has retired from service on 31.07.2015.

iii) DGO 3 Sri M.K.Bhaskar, has retired from service on 29.02.2020.

iv) DGO 4 Sri Ramachandrappa, is due to retire from service on 31.07.2039.

7. Having regard to the nature of charge 'proved' against DGOs and considering the totality of circumstances, it is hereby recommended to the Govt.;

i) to impose penalty of ' withholding one increment payable to DGO 1 Sri Sridhara Churi with cumulative effect'.

ii) to impose penalty of ' withholding 05%(five) pension payable to DGO 2 Sri Ramakrishna, for a period of two years'.

iii) to impose penalty of ' withholding 05%(five) pension payable to DGO 2 Sri Ramakrishna, for a period of two years'.

iv) to impose penalty of ' withholding one increment payable to DGO 4 Sri Ramachandrappa, with cumulative effect.

8. Action taken in the matter shall be intimated to this Authority.

Connected records are enclosed herewith.

Sd/- 19/4/22

(JUSTICE B.S.PATIL)
Upalokayukta-1,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-523/2018/ಎ.ಆರ್.ಇ-14

ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 13/04/2021.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ – (1) **ಶ್ರೀ. ಶ್ರೀಧರ ಚೂರಿ,** ಅಂದಿನ ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು (2) **ಶ್ರೀ. ರಾಮಕೃಷ್ಣಪ್ಪ,** ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು (ನಿವೃತ್ತ) (3) **ಶ್ರೀ. ಎಂ.ಕೆ ಭಾಸ್ಕರ್,** ಅಂದಿನ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು ಮತ್ತು (4) ಶ್ರೀ. **ರಾಮಚಂದ್ರಪ್ಪ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊರಳಾಡಿ ಗ್ರಾಮ ಪಂಚಾಯತಿ, ನಂಜನಗೂಡು ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/3817/2015/ಡಿಆರ್ಇ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 29/08/2018.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 92 ಇಎನ್‌ಕ್ಯೂ 2018, ಬೆಂಗಳೂರು, ದಿನಾಂಕ: 16/11/2018.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/523/2018, ಬೆಂಗಳೂರು ದಿನಾಂಕ: 30/11/2018.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಹೆಚ್ ಎಂ ಮಲ್ಲೇಗೌಡ** ಬಿನ್ ಮಹದೇವು, ಹೊರಳವಾಡಿ–ಹೊಸೂರು ಗ್ರಾಮ, ಕಸಬಾ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ (1) **ಶ್ರೀ. ಶ್ರೀಧರ ಚೂರಿ,** ಅಂದಿನ ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು (2) **ಶ್ರೀ. ರಾಮಕೃಷ್ಣಪ್ಪ,** ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು (ನಿವೃತ್ತ) (3) **ಶ್ರೀ. ಎಂ.ಕೆ ಭಾಸ್ಕರ್,** ಅಂದಿನ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು ಮತ್ತು (4) **ಶ್ರೀ. ರಾಮಚಂದ್ರಪ್ಪ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊರಳಾಡಿ ಗ್ರಾಮ ಪಂಚಾಯತಿ, ನಂಜನಗೂಡು ಇವರುಗಳ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಹೊರಳವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮಗಳಾದ ಹೊರಳವಾಡಿ ಹೊಸೂರು ಗ್ರಾಮಕ್ಕೆ ನೀರು ಪೂರೈಸುವ ಸಲುವಾಗಿ ಸರ್ಕಾರದಿಂದ 2013–14ನೇ ಸಾಲಿನಲ್ಲಿ ಎನ್‌ಆರ್‌ಡಿಡಬ್ಲ್ಯೂಪಿ ಕ್ರಿಯಾ ಯೋಜನೆ ಅಡಿಯಲ್ಲಿ ರೂ.8 ಲಕ್ಷ ಬಿಡುಗಡೆಯಾಗಿದ್ದು ಹಾಗೂ ಸರ್ಕಾರದಿಂದ ಬಿಡುಗಡೆಯಾದ ಮೊತ್ತವನ್ನು ಅತಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ಹೊರಳವಾಡಿ ಹೊಸೂರು ಗ್ರಾಮಕ್ಕೆ ಉಪಯೋಗಿಸಿ, ನೀರು ಪೂರೈಕೆ ಮಾಡದೇ, ಬಿಡುಗಡೆಯಾದ ಹಣವನ್ನು ಉಪಯೋಗಿಸಿ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಬಸವೇಶ್ವರ ನಗರಕ್ಕೆ ಅಕ್ರಮವಾಗಿ ನೀರು ಪೂರೈಕೆ ಮಾಡಿದ್ದಾರೆಂದು ಆಪಾದಿಸಿದ್ದಾರೆ. ಆದ್ದರಿಂದ, ಆ.ಸ.ನೌ ರವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

2. ತದನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 16/11/2018 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 30/11/2018 ರಂದು ಅಪರ ನಿಬಂಧಕರು,

ವಿಚಾರಣೆಗಳು–14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರುಗಳ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು–14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 03/01/2019 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ–1

ಆ.ಸ.ನೌ.ರಾದ 1) ಶ್ರೀ. ಶ್ರೀಧರ ಚೂರಿ, ಸಹಾಯಕ ಅಭಿಯಂತರರು (ಪ್ರಸ್ತುತ ಲೋಕೋಪಯೋಗಿ ಇಲಾಖೆ, ಬದಾಮಿ ಉಪವಿಭಾಗ), 2) ಶ್ರೀ. ರಾಮಕೃಷ್ಣಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಸ್ತುತ ನಿವೃತ್ತ), 3) ಶ್ರೀ. ಎಂ.ಕೆ ಭಾಸ್ಕರ್ ಕಾರ್ಯಪಾಲಕ ಅಭಿಯಂತರರು (ಪ್ರಸ್ತುತ ಶಿವಮೊಗ್ಗ ಕಾಡಾ ಅಧೀಕ್ಷಕ ಅಭಿಯಂತರರು) ಮತ್ತು 4) ಶ್ರೀ. ರಾಮಚಂದ್ರಪ, ಹೊರಳವಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಹೊರಳವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮಗಳಾದ ಹೊರಳವಾಡಿ ಹೊಸೂರು ಗ್ರಾಮಕ್ಕೆ ನೀರು ಪೂರೈಸುವ ಸಲುವಾಗಿ ಸರ್ಕಾರದಿಂದ 2013–14ನೇ ಸಾಲಿನಲ್ಲಿ ಎನ್‌ಆರ್‌ಡಿಡಬ್ಲ್ಯೂಪಿ ಕ್ರಿಯಾ ಯೋಜನೆ ಅಡಿಯಲ್ಲಿ ರೂಪಾಯಿ ಎಂಟು ಲಕ್ಷಗಳು ಬಿಡುಗಡೆಯಾಗಿದೆ ಹಾಗೂ ಸರ್ಕಾರದಿಂದ ಬಿಡುಗಡೆಯಾದ ಮೊತ್ತವನ್ನು ಅತಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ಹೊರಳವಾಡಿ ಹೊಸೂರು ಗ್ರಾಮಕ್ಕೆ ಉಪಯೋಗಿಸಿ, ನೀರು

ಪೂರೈಕೆ ಮಾಡದೇ, ಬಿಡುಗಡೆಯಾದ ಹಣವನ್ನು ಉಪಯೋಗಿಸಿ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಬಸವೇಶ್ವರ ನಗರಕ್ಕೆ ಅಕ್ರಮವಾಗಿ ನೀರು ಪೂರೈಕೆ ಮಾಡಿ ಕರ್ತವ್ಯಲೋಪ ಎಸಗಿರುತ್ತೀರಿ.

2. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ಶ್ರೀ. ಹೆಚ್.ಎಂ ಮಲ್ಲೇಗೌಡ ಬಿನ್ ಮಹದೇವು, ಹೊರಳವಾಡಿ-ಹೋಸೂರು ಗ್ರಾಮ, ಕಸಬಾ ಹೋಬಳಿ, ನಂಜನಗೂಡು ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು 1) ಶ್ರೀ. ಶ್ರೀಧರ ಚೂರಿ, ಸಹಾಯಕ ಅಭಿಯಂತರರು (ಪ್ರಸ್ತುತ ಲೋಕೋಪಯೋಗಿ ಇಲಾಖೆ, ಬದಾಮಿ ಉಪವಿಭಾಗ), 2) ಶ್ರೀ.ರಾಮಕೃಷ್ಣಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಸ್ತುತ ನಿವೃತ್ತ), 3) ಶ್ರೀ.ಎಂ.ಕೆ.ಭಾಸ್ಕರ್ ಕಾರ್ಯಪಾಲಕ ಅಭಿಯಂತರರು (ಪ್ರಸ್ತುತ ಶಿವಮೊಗ್ಗ ಕಾಡಾ ಅಧೀಕ್ಷಕ ಅಭಿಯಂತರರು) ಮತ್ತು 4) ಶ್ರೀ.ರಾಮಚಂದ್ರಪ, ಹೊರಳವಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ

8

ಅಧಿಕಾರಿ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

4. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:-</u> **ದೂರಿನ ಸಂಕ್ಷಿಪ್ತ ವಿವರಣೆ:-** ಹೊರಳವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮಗಳಾದ ಹೊರಳವಾಡಿ ಹೊಸೂರು ಗ್ರಾಮಕ್ಕೆ ನೀರು ಪೂರೈಸುವ ಸಲುವಾಗಿ ಸರ್ಕಾರದಿಂದ 2013-14ನೇ ಸಾಲಿನಲ್ಲಿ ಎನ್‌ಆರ್‌ಡಿಡಬ್ಲ್ಯೂಪಿ ಕ್ರಿಯಾ ಯೋಜನೆ ಅಡಿಯಲ್ಲಿ ರೂಪಾಯಿ ಎಂಟು ಲಕ್ಷಗಳು ಬಿಡುಗಡೆಯಾಗಿದೆ ಹಾಗೂ ಸರ್ಕಾರದಿಂದ ಬಿಡುಗಡೆಯಾದ ಮೊತ್ತವನ್ನು ಅತಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ಹೊರಳವಾಡಿ ಹೊಸೂರು ಗ್ರಾಮಕ್ಕೆ ಉಪಯೋಗಿಸಿ, ನೀರು ಪೂರೈಕೆ ಮಾಡದೇ, ಬಿಡುಗಡೆಯಾದ ಹಣವನ್ನು ಉಪಯೋಗಿಸಿ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಬಸವೇಶ್ವರ ನಗರಕ್ಕೆ ಅಕ್ರಮವಾಗಿ ನೀರು ಪೂರೈಕೆ ಮಾಡಿದ್ದಾರೆಂದು ಆಪಾದಿಸಿದ್ದಾರೆ.

5. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಹೊರಳವಾಡಿ ಹೊಸೂರು ಗ್ರಾಮ ವ್ಯಾಪ್ತಿಯ ಹೊರಳವಾಡಿ ಗ್ರಾಮಕ್ಕೆ ಹೊಂದಿಕೊಂಡಂತೆ ಹೊಸ ಬಡಾವಣೆಗಳ ಮತ್ತು ಪ್ರೌಢ, ಪ್ರಾಥಮಿಕ ಶಾಲೆಗಳ ವ್ಯಾಪ್ತಿಗೆ ನೀರಿನ ಅವಶ್ಯಕತೆಯಿದೆಯೆಂದು ಗ್ರಾಮಸ್ಥರು ಹೇಳಿದ್ದಾರೆ. ಹಾಲಿ ಹೊರಳವಾಡಿ ಗ್ರಾಮಕ್ಕೆ ಈ ಹಿಂದೆ ಕೊಳವೆ ಬಾವಿಗೆ ಅಳವಡಿಸಿದ್ದ ಪಂಪ್‌ಸೆಟ್ ಹಾಳಾಗಿದ್ದು, ಹೊಸದಾಗಿ ಹಾಕಲು ಮತ್ತು ಹೊರಳವಾಡಿ ಗ್ರಾಮದಲ್ಲಿ ಹೆಚ್ಚಿನ ಜನಸಂಖ್ಯೆ ಇರುವುದರಿಂದ ಮತ್ತು ಪ್ರೌಢ, ಪ್ರಾಥಮಿಕ ಶಾಲೆಗಳ ವ್ಯಾಪ್ತಿಗೆ ಹಾಳಾಗಿರುವ ಭಾಗಕ್ಕೆ ಪೈಪ್‌ಲೈನನ್ನು ಮತ್ತು ಈಗ ಮಂಜೂರಾಗಿರುವ

ಹೊರಳವಾಡಿ ಹೊಸೂರು ಗ್ರಾಮ ವ್ಯಾಪ್ತಿಗಳಲ್ಲಿ ರೂಪಾಯಿ ಎಂಟು ಲಕ್ಷಗಳ ಅನುದಾನ ಮಂಜೂರಾಗಿದ್ದು, ಹೊರಳವಾಡಿ ಗ್ರಾಮ ವ್ಯಾಪ್ತಿಯಲ್ಲಿ ಕಿರು ನೀರು ಸರಬರಾಜನ್ನು ಅಳವಡಿಸಲು ಗ್ರಾಮಸ್ಥರು ಮತ್ತು ಮೇಲಾಧಿಕಾರಿಗಳು ತಿಳಿಸಿದ್ದರ ಮೇರೆಗೆ ಮೊದಲು ಹೊರಳವಾಡಿ ಗ್ರಾಮ ವ್ಯಾಪ್ತಿಗೆ ಉಪಯೋಗಿಸಿಕೊಂಡು, ಹಣ ಉಳಿದರೆ ಹೊಸೂರು ಗ್ರಾಮ ವ್ಯಾಪ್ತಿಗೆ ಅಳವಡಿಸಲು ತಿಳಿಸಿದ್ದು, ಅದರಂತೆ ಹೊರಳವಾಡಿ ಮತ್ತು ಇತರೆ ಹತ್ತಿರದ ಭಾಗಗಳಿಗೆ ನೀರು ಸರಬರಾಜು ವ್ಯವಸ್ಥೆ ಕೈಗೊಳ್ಳಲು ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಅದರಂತೆ ರೂಪಾಯಿ ಎಂಟು ಲಕ್ಷಗಳಿಗೆ ಕಾಮಗಾರಿಯನ್ನು ಪರಿಪೂರ್ಣವಾಗಿ ಮುಗಿಸಿದ್ದು, ಗ್ರಾಮಸ್ಥರು ಮೇಲಿನ ಯೋಜನೆಯ ಉಪಯೋಗವನ್ನು ಪಡೆಯುತ್ತಿದ್ದಾರೆ. ಹೊಸೂರು ಗ್ರಾಮದ ವ್ಯಾಪ್ತಿಗೆ ಮುಂದಿನ ಸಾಲಿನಲ್ಲಿ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳು ತಿಳಿಸಿದ ಮೇರೆಗೆ, ಸದರಿ ಕಾಮಗಾರಿಯನ್ನು ಹೊರಳವಾಡಿ ಗ್ರಾಮ ವ್ಯಾಪ್ತಿಗೆ ಕೊಟ್ಟಿರುವ ಅನುದಾನದಲ್ಲಿ ಸೀಮಿತಗೊಳಿಸಿದೆ ಹಾಗೂ ರೂಪಾಯಿ ಎಂಟು ಲಕ್ಷಗಳು ಅನುದಾನದಲ್ಲಿ ಬಸವೇಶ್ವರ ಗ್ರಾಮದಲ್ಲಿ ಅನುಷ್ಠಾನಗೊಳಿಸಿಲ್ಲವೆಂದು ಹೇಳಿದ್ದಾರೆ. ಅಲ್ಲದೇ, ಹೊರಳವಾಡಿ ಹೊಸೂರು ಗ್ರಾಮಕ್ಕೆ ಮೇಲಾಧಿಕಾರಿಗಳ ಆದೇಶದಂತೆ ಹಾಗೂ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ತಿಳಿಸಿರುವಂತೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಅದನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ರವರು ಮಂಜೂರು ಮಾಡಿದ್ದು, ಅದರಂತೆ ಅನುಷ್ಠಾನಗೊಳಿಸಲಾಗಿದೆಯೆಂದು ಹೇಳಿದ್ದಾರೆ.

6. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರ ಆಕ್ಷೇಪಣೆಯನ್ನು ಅಲ್ಲಗಳೆದು, ದೂರಿನಲ್ಲಿನ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

7. ಒಂದನೇ ಎದುರುದಾರರು ಹಾಜರಾಗಿ, ಸದರಿ ಯೋಜನೆಯ ಅನುದಾನದ ಹಣವನ್ನು ಹೊರಳವಾಡಿ ಹೊಸೂರು ಗ್ರಾಮದಿಂದ ಹೊರಳವಾಡಿ ಗ್ರಾಮಕ್ಕೆ ಅಳವಡಿಸುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಿಳಿಸಿರುವುದಾಗಿ ಹೇಳಿದ್ದಾರೆ.

8. ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ.ರಾಮಕೃಷ್ಣಪ್ಪ ಮತ್ತು ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ.ಎಂ.ಕೆ.ಭಾಸ್ಕರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ರವರುಗಳನ್ನು 2 ಮತ್ತು 3ನೇ ಎದುರುದಾರರನ್ನಾಗಿ ಸೇರಿಸಿ, ಸದರಿಯವರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

> ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ 2013–14ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ನಂಜನಗೂಡು ತಾಲ್ಲೂಕ್ ಹೊರಳವಾಡಿ ಹೊಸೂರು ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆಗೆ ಮಂಜೂರಾಗಿರುವ ರೂಪಾಯಿ ಎಂಟು ಲಕ್ಷ ಅನುದಾನದಲ್ಲಿ ಬಸವೇಶ್ವರ ಗ್ರಾಮದಲ್ಲಿ ಕೈಗೊಂಡಿದ್ದಾರೆಂದು ದೂರಿನಲ್ಲಿ ಸುಳ್ಳು ಆಪಾದನೆ ಮಾಡಿದ್ದು, ಸದರಿ ಸಾಲಿನಲ್ಲಿ ಮಂಜೂರಾದ ಅನುದಾನವನ್ನು ಹೊರಳವಾಡಿ ಹೊಸೂರು ಗ್ರಾಮಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಹೊರಳವಾಡಿ, ಹೊಸೂರು ಗ್ರಾಮಗಳಲ್ಲಿ ಹೊರಳವಾಡಿ ಗ್ರಾಮದಲ್ಲಿ ಹೆಚ್ಚು ಜನಸಂಖ್ಯೆ ಇದ್ದು, ಅದರಂತೆ

ಹೊರಳವಾಡಿ ಗ್ರಾಮಕ್ಕೆ ನೀರು ಸರಬರಾಜು ಮಾಡಬೇಕಾದ್ದರಿಂದ, ಕ್ರಿಯಾ ಯೋಜನೆಯ ಪ್ರಕಾರ ಲಭ್ಯವಿರುವ ಅನುದಾನದಲ್ಲಿ ಕಾಮಗಾರಿಗಳನ್ನು ಮಾಡಿ, ಗ್ರಾಮ ಪಂಚಾಯತ್‌ಗೆ ವಹಿಸಲಾಗಿದೆ. ಸದರಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸದಸ್ಯರು ಮತ್ತು ಗ್ರಾಮಸ್ಥರು ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಹೊರಳವಾಡಿ ಗ್ರಾಮದಲ್ಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ವಿನಂತಿಸಿದ್ದರಿಂದ, ಹೊರಳವಾಡಿ ಹೊಸೂರು ಗ್ರಾಮಕ್ಕೆ ಮಂಜೂರಾಗಿರುವ ರೂಪಾಯಿ ಎಂಟು ಲಕ್ಷ ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಗ್ರಾಮದಲ್ಲೇ ಕಾಮಗಾರಿಯನ್ನು ಕೈಗೊಂಡಿದ್ದು, ಬಸವೇಶ್ವರ ಗ್ರಾಮದಲ್ಲಿ ಸದರಿ ಅನುದಾನದಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿಲ್ಲವೆಂದು ಹೇಳಿದ್ದಾರೆ.

9. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ನಂಜನಗೂಡು ತಾಲ್ಲೂಕ್ ಹೊರಳವಾಡಿ ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆ ಕಾಮಗಾರಿಯು 2013–14ನೇ ಸಾಲಿನಲ್ಲಿ ಮಂಜೂರಾಗಿದ್ದು, ನಿಯಮಾನುಸಾರ ಟೆಂಡರ್ ಕರೆದು ಶ್ರೀ.ಟಿ.ಉಮೇಶ್, 2ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಹೊರಳವಾಡಿ ಹೊಸೂರು ಗ್ರಾಮವು ತಾಲ್ಲೂಕ್ ಕೇಂದ್ರದಿಂದ 7 ಕಿ.ಮೀ. ದೂರವಿದ್ದು, ಈ ಗ್ರಾಮಕ್ಕೆ ಕುಡಿಯುವ ನೀರಿನ ಅವಶ್ಯಕತೆ ಇದ್ದು, ಹೊರಳವಾಡಿ ಹೊಸೂರು ಗ್ರಾಮವು ಹೊರಳವಾಡಿ ಗ್ರಾಮ ಪಂಚಾಯತ್‌ಗೆ ಸೇರಿದ್ದಾಗಿದೆ. ಹೊರಳವಾಡಿ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ನಿಭಾಯಿಸುವ ಮೂಲ ಉದ್ದೇಶದಿಂದ 2013–14ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂಜನಗೂಡು ರವರ ತಾಂತ್ರಿಕ

ವರದಿಯಂತೆ ಅಂದಾಜು ಪಟ್ಟಿಗೆ ಮಂಜೂರಾತಿಯನ್ನು ವಿಭಾಗ ಕಛೇರಿಯಿಂದ ನೀಡಿದೆ. ದೂರುದಾರರು ಆಪಾದಿಸಿದಂತೆ ಬಸವೇಶ್ವರ ನಗರದಲ್ಲಿ ಕಾಮಗಾರಿಯನ್ನು ನಿರ್ವಹಿಸಿಲ್ಲ. ಕಾಮಗಾರಿಯನ್ನು ಅಂದಾಜು ಪಟ್ಟಿಯಲ್ಲಿ ನೀಡಿರುವ ತಾಂತ್ರಿಕ ವರದಿಯಂತೆ ಹೊರಳವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಾಸ್ತವತೆಗೆ ತಕ್ಕಂತೆ ಕುಡಿಯುವ ನೀರಿನ ಸಮಸ್ಯೆಯನ್ನು ಗಣನೆಗೆ ತೆಗೆದುಕೊಂಡು ನಿರ್ವಹಿಸಿದೆ. ಸದರಿ ಕಾಮಗಾರಿಯ ಒಂದನೇ ಭಾಗಶಃ ಬಿಲ್ ತಮ್ಮ ಅವಧಿಯಲ್ಲಿ ಪಾವತಿಯಾಗಿದ್ದು, ಎರಡನೇ ಮತ್ತು ಅಂತಿಮ ಬಿಲ್ ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು ಕಛೇರಿಯಲ್ಲಿ ಪಾವತಿಯಾಗಿದೆ. ಸದರಿ ಅಂತಿಮ ಬಿಲ್ಲನ್ನು 1ನೇ ಎದುರುದಾರರು ಹಾಗೂ ಶ್ರೀ.ರಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಉಪವಿಭಾಗ, ನಂಜನಗೂಡು, ಶ್ರೀ.ಎನ್.ನಂಜಯ್ಯ, ಕಾರ್ಯಪಾಲಕ ಅಭಿಯಂತರರು (ನಿವೃತ್ತಿ) ರವರ ಅವಧಿಯಲ್ಲಿ ಪಾವತಿಯಾಗಿದೆ. ಸದರಿ ಕಾಮಗಾರಿಯು ದಿ:16/01/15ರಂದು ಪೂರ್ಣಗೊಂಡು ಸಂಬಂಧಿಸಿದ ಹೊರಳವಾಡಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ. ಸದರಿ ಕಾಮಗಾರಿಯಿಂದ ಹೊರಳವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಗ್ರಾಮಸ್ಥರಿಗೆ ಕುಡಿಯುವ ನೀರಿನ ಅನುಕೂಲವಾಗಿದೆ. ದೂರಿನಲ್ಲಿ ಯಾವುದೇ ಸತ್ಯಾಂಶ ಇಲ್ಲವೆಂದು ಹೇಳಿದ್ದಾರೆ.

10. ಎರಡು (2) ಮತ್ತು 3ನೇ ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

11. ಹೊರಳವಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಶ್ರೀ.ರಾಮಚಂದ್ರಪ್ಪ ರವರನ್ನು 4ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ಆಕ್ಷೇಪಣೆಯನ್ನು ಕೇಳಲಾಗಿ, 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

> 2013–14ನೇ ಸಾಲಿನಲ್ಲಿ ಹೊರಳವಾಡಿ ಹೊಸೂರು ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆ ಇದ್ದರಿಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್, ತಾಂತ್ರಿಕ ಉಪವಿಭಾಗ ರವರು ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಸದರಿ ಯೋಜನೆಯ ನೀರನ್ನು ಬಸವೇಶ್ವರ ನಗರ ಗ್ರಾಮಕ್ಕೆ ಪೂರೈಸಲಾಗಿದೆ. ಯೋಜನೆಯ ಅನುಷ್ಠಾನದ ಬಗ್ಗೆ ಆ ಸಮಯದಲ್ಲಿ ದೂರುದಾರರು ಗ್ರಾಮ ಪಂಚಾಯತ್‌ಗೆ ಯಾವುದೇ ದೂರು ನೀಡದ ಕಾರಣ ಗ್ರಾಮ ಪಂಚಾಯತ್‌ನಿಂದ ಆಕ್ಷೇಪಣೆ ಇಲ್ಲವೆಂದು ಹೇಳಿದ್ದಾರೆ.

12. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

    1) ನಂಜನಗೂಡು ತಾಲ್ಲೂಕ್ ಹೊರಳವಾಡಿ ಹೊಸೂರು ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆ ಕಾಮಗಾರಿಯು 2013–14ನೇ ಸಾಲಿನಲ್ಲಿ ಮಂಜೂರಾಗಿದ್ದು, ನಿಯಮಾನುಸಾರ ಟೆಂಡರ್ ಕರೆದು ಶ್ರೀ.ಟಿ.ಉಮೇಶ್, 2ನೇ ದರ್ಜೆ ಗುತ್ತಿಗೆದಾರರು ನಂಜನಗೂಡು ತಾಲ್ಲೂಕ್ ರವರಿಗೆ ಕಾಮಗಾರಿಯನ್ನು ಕರಾರು ಮುಖೇನ ವಹಿಸಲಾಗಿದೆಯೆಂದು ಕಡತ ಪರಿಶೀಲನೆಯಲ್ಲಿ ಕಂಡು ಬಂದಿದೆ. ದಿ:16/01/15ರಲ್ಲಿ ಕಾಮಗಾರಿಯು ಮುಕ್ತಾಯಗೊಂಡಿರುತ್ತದೆಂದು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿದ್ದಾರೆ. ಸದರಿ ಕಾಮಗಾರಿಯಿಂದ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಹೊರಳವಾಡಿ ಹೊಸೂರು ಗ್ರಾಮಕ್ಕೆ ನೀರು ಪೂರೈಕೆ ಮಾಡದೇ

ಬಸವೇಶ್ವರ ನಗರಕ್ಕೆ ಅಕ್ರಮವಾಗಿ ನೀರು ಪೂರೈಕೆ ಮಾಡಿದ್ದಾರೆಂದು ದೂರುದಾರರು ಆಪಾದಿಸಿದ್ದಾರೆ. ಎದುರುದಾರರು ಹಾಜರುಪಡಿಸಿದ ದಾಖಲೆಗಳ ಪ್ರಕಾರ ಸದರಿ ಕಾಮಗಾರಿಯು ಹೊರಳವಾಡಿ ಗ್ರಾಮ ಪಂಚಾಯತ್‌ನ ಹೊರಳವಾಡಿ ಹೊಸೂರು ಗ್ರಾಮದಲ್ಲಿ ನಿರ್ವಹಿಸಿರುವುದು ಕಂಡು ಬಂದಿದೆ. ಕಾಮಗಾರಿ ಪೂರ್ಣಗೊಂಡು ಹೊರಳವಾಡಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಿರುವುದು ಹಸ್ತಾಂತರ ಪಟ್ಟಿಯ ಪ್ರತಿ ಮತ್ತು ಕಾಮಗಾರಿಯ ಭಾವಚಿತ್ರಗಳಿಂದ ಕಂಡು ಬಂದಿದೆ. ಸದರಿ ಯೋಜನೆಯಿಂದ ಬಸವೇಶ್ವರ ನಗರಕ್ಕೆ ಮಾತ್ರ ಸೌಲಭ್ಯವಾಗಿದೆಯೆಂಬ ದೂರಿನ ಆಪಾದನೆಗೆ ಪೂರಕವಾದ ಯಾವುದೇ ಅಂಶಗಳು ಕಂಡು ಬಂದಿಲ್ಲ;

2) ಸದರಿ ಯೋಜನೆಗೆ ಮಂಜೂರಾದ ಹಣವನ್ನು ಹೊರಳವಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸೂಚನೆಯಂತೆ ಹೊರಳವಾಡಿ ಹೊಸೂರಿನಿಂದ ಹೊರಳವಾಡಿ ಗ್ರಾಮದ ಕಾಮಗಾರಿಗೆ ಅಳವಡಿಸಲಾಗಿದೆಯೆಂದು 1ನೇ ಎದುರುದಾರರು ದಿ:16/01/17ರಂದು ಹಾಜರಾಗಿ ಹೇಳಿದ್ದಾರೆ.

3) ಸದರಿ ಯೋಜನೆ ಅನುಷ್ಠಾನಗೊಳ್ಳುವ ಅವಧಿಯಲ್ಲಿ 4ನೇ ಎದುರುದಾರರು ಹೊರಳವಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಒಂದು ಯೋಜನೆಗೆ ಮಂಜೂರಾದ ಹಣವನ್ನು ಇನ್ನೊಂದು ಯೋಜನೆಗೆ ವರ್ಗಾಯಿಸುವ ಅಧಿಕಾರ ಅವರಿಗಿಲ್ಲ. 1 ರಿಂದ 3ನೇ ಎದುರುದಾರರು ಸದರಿ ಅವಧಿಯಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆ, ನಂಜನಗೂಡು ಉಪವಿಭಾಗದಲ್ಲಿ ಕ್ರಮವಾಗಿ, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯನಿರ್ವಹಿಸಿದ್ದು, ಸದರಿಯವರುಗಳು ತಮ್ಮ ಕಾರ್ಯ ವ್ಯಾಪ್ತಿ ಮೀರಿ 4ನೇ ಎದುರುದಾರರ ಸೂಚನೆಯ ಮೇರೆಗೆ ಒಂದು ಗ್ರಾಮಕ್ಕೆ ಮಂಜೂರಾದ ಯೋಜನೆಯ ಅನುದಾನವನ್ನು ಮತ್ತೊಂದು ಗ್ರಾಮಕ್ಕೆ ವರ್ಗಾಯಿಸಿ, ಕಾರ್ಯಾನುಷ್ಠಾನಗೊಳಿಸಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

13. ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆ.ಸ.ನೌಕರಗಳಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ ಆ.ಸ.ನೌಕರರುಗಳಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

14. ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಆ.ಸ.ನೌ.ರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–1, 2, 3 ಮತ್ತು 4 ರವರು ದಿನಾಂಕ:

06/02/2019 ರಂದು ಹಾಜರಾಗಿದ್ದು, ಆ.ಸ.ನೌರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌ–1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಸಹಾಯಕ ಅಭಿಯಂತರರು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ 2013–14ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿರುವ ಅವಧಿಯಲ್ಲಿ NRDWP ಯೋಜನೆಯಲ್ಲಿ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಉಪವಿಭಾಗ ನಂಜನಗೂಡು ಇಲಾಖೆಗೆ ನೀರು ಸರಬರಾಜು ಕಾಮಗಾರಿಗಳಿಗೆ ರೂ.8 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಗ್ರಾಮ ಪಂಚಾಯಿತಿಯಿಂದ ಹೊರಳವಾಡಿ ಗ್ರಾಮಕ್ಕೆ ಕಿರು ನೀರು ಸರಬರಾಜು ಘಟಕವನ್ನು ಬಳಕೆ ಮಾಡಿಕೊಳ್ಳಲು ಅಂದಿನ ಹೊರಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ಸಲ್ಲಿಸಿರುವ ಮನವಿಯಂತೆ, ತನ್ನ ಮೇಲಾಧಿಕಾರಿಗಳಿಗೆ ಅನುಷ್ಠಾನಗೊಳಿಸಲು ಪತ್ರದಲ್ಲಿ ಮನವಿಯಲ್ಲಿ ಸಲ್ಲಿಸಿದ್ದು, ಮೇಲ್ಕಂಡ ಇವರ ಇಲಾಖೆಯಲ್ಲಿ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ಪಡೆದುಕೊಂಡಿರುತ್ತಾರೆ. ಈ ಬಗ್ಗೆ ಸರ್ಕಾರದ ಆದೇಶದಂತೆ ಗ್ರಾಮ ಪಂಚಾಯಿತಿಗೆ ರೂ.8 ಲಕ್ಷ ಅನುದಾನದಲ್ಲಿ ಹೊರಳವಾಡಿ ಹೊಸೂರು ಗ್ರಾಮಕ್ಕೆ ಬಳಕೆ ಮಾಡಿಕೊಳ್ಳಲು ಸಾಮಾನ್ಯ ಸಭೆಯಲ್ಲಿ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯವರು ಅನುಮೋದಿಸಿರುತ್ತಾರೆ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ಸಾಮಾನ್ಯ ಸಭೆಯ ತೀರ್ಮಾನದಂತೆ, ಅಧ್ಯಕ್ಷರ ಆದೇಶದಂತೆ ನೀರು ಸರಬರಾಜಿಗೆ ಸಂಬಂಧಿಸಿದಂತೆ ಆದ್ಯತೆ ಮೇರೆಗೆ

ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಹೊರಳವಾಡಿ ಗ್ರಾಮಕ್ಕೆ ಬಳಕೆ ಮಾಡಿಕೊಂಡು ಉಳಿಕೆ ಅನುದಾನವನ್ನು ಹೊಸೂರು ಗ್ರಾಮಕ್ಕೆ ನೀರು ಸರಬರಾಜು ಯೋಜನೆಗಳಿಗೆ ಬಳಕೆ ಮಾಡಲು ಪತ್ರವನ್ನು ಪಡೆದುಕೊಂಡು, ಇವರ ಮೇಲಾಧಿಕಾರಿಗಳಿಗೆ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡಲು ಸಲ್ಲಿಸಿರುತ್ತಾರೆ. ತನ್ನ ಮೇಲಾಧಿಕಾರಿಗಳ ನಿರ್ದೇಶನದಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸಿರುತ್ತೇನೆ ಎಂದು ಹೇಳಿರುತ್ತಾರೆ.

8. ಮುಂದುವರೆದು, ದೂರುದಾರರು ನಿಯಮಾನುಸಾರ ಪರಿಶೀಲಿಸದೆ ಏಕ ಪಕ್ಷವಾಗಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಅನುದಾನವನ್ನು ಬಳಕೆ ಮಾಡಿಕೊಂಡು ಇದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬಸವೇಶ್ವರ ಗ್ರಾಮಕ್ಕೆ ಬೇರೆ ಆರ್ಥಿಕ ವರ್ಷದಲ್ಲಿ ಕಿರು ನೀರು ಸರಬರಾಜಿಗೆ ನಿಗದಿಪಡಿಸಿರುವ ಅನುದಾನ ಹಾಗೂ ಬೇರೆ ಯೋಜನೆಯಲ್ಲಿ ಅನುಮೋದನೆ ಪಡೆದಿರುವಂತೆ ಕಾಮಗಾರಿ ಅನುಷ್ಠಾನಗೊಂಡಿರುವುದೆಯೆಂದು ಮನವರಿಕೆ ಮಾಡಿಕೊಂಡರೂ ಸಹ ಸಳ್ಳು ದೂರನ್ನು ಸಲ್ಲಿಸಿರುತ್ತಾರೆಂದು ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

9. ಆ.ಸ.ನೌ–2 ಮತ್ತು 3 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ 2013–14ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಹೊರಳವಾಡಿ, ಹೊಸೂರು ಗ್ರಾಮಗಳಲ್ಲಿ ಹೊರಳವಾಡಿ ಹೆಚ್ಚು ಜನಸಂಖ್ಯೆ ಇರುವ ಗ್ರಾಮವಾಗಿದ್ದು, ಅದರಂತೆ ಮುಖ್ಯವಾಗಿ ಹೊರಳವಾಡಿ ಗ್ರಾಮಕ್ಕೆ ನೀರು ಸರಬರಾಜು ಮಾಡಬೇಕಾಗಿದ್ದರಿಂದ ಕ್ರಿಯಾ ಯೋಜನೆಯ ಪ್ರಕಾರ ಲಭ್ಯವಿರುವ ಅನುದಾನದಲ್ಲಿ ಕಾಮಗಾರಿಗಳನ್ನು ಮಾಡಿ ಗ್ರಾಮ ಪಂಚಾಯಿತಿಗೆ ವಹಿಸಲಾಗಿದೆ. ಮುಂದುವರೆದು, ಹೊರಳವಾಡಿ ಹೊಸೂರು ಗ್ರಾಮಕ್ಕೆ ಮಂಜೂರಾಗಿರುವ ರೂ.8 ಲಕ್ಷಗಳಿಗೆ ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಗ್ರಾಮದಲ್ಲಿ ಈ ಮೇಲ್ಕಂಡ ಅನುದಾನದಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ, ತಾವು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

10. ಆ.ಸ.ನೌ–4 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ 2013–14ನೇ ಸಾಲಿನಲ್ಲಿ NRDWP ಯೋಜನೆಯಲ್ಲಿ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಉಪವಿಭಾಗ ನಂಜನಗೂಡು ಇಲಾಖೆಗೆ ನೀರು ಸರಬರಾಜು ಕಾಮಗಾರಿಗಳಿಗೆ ರೂ.8 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅವರ ಇಲಾಖೆಯಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆ ಪಡೆದುಕೊಂಡಿರುತ್ತಾರೆ. ಈ ಬಗ್ಗೆ ಸರ್ಕಾರದ ಆದೇಶದಂತೆ ಗ್ರಾಮ ಪಂಚಾಯತಿಗೆ ರೂ.8 ಲಕ್ಷ ಅನುದಾನದಲ್ಲಿ ಹೊರಳವಾಡಿ ಹೊಸೂರು ಗ್ರಾಮಕ್ಕೆ ಬಳಕೆ ಮಾಡಿಕೊಳ್ಳಲು ಸಾಮಾನ್ಯ ಸಭೆಯಲ್ಲಿ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯವರು ಅನುಮೋದಿಸಿದ್ದು, ಅಧ್ಯಕ್ಷರ ಆದೇಶದಂತೆ ನೀರು ಸರಬರಾಜಿಗೆ ಸಂಬಂಧಿಸಿದಂತೆ ಅದ್ಯತೆ ಮೇರೆಗೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಹೊರಳವಾಡಿ ಗ್ರಾಮಕ್ಕೆ ಉಳಿಕೆ ಅನುದಾನವನ್ನು ಹೊಸೂರು ಗ್ರಾಮಕ್ಕೆ ನೀರು ಸರಬರಾಜು ಯೋಜನೆಗಳಿಗೆ ಬಳಕೆ ಮಾಡಲು ಪತ್ರವನ್ನು ನೀಡಿರುತ್ತೇನೆ, ತಾನು ಕಾಮಗಾರಿಯನ್ನು ಅನುಷ್ಠಾನಗೊಳಿಸಿರುವುದಿಲ್ಲ ಅಂತಾ ಹೇಳಿರುತ್ತಾರೆ. ಸದರಿ ಪ್ರಕರಣವು ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಅನುಷ್ಠಾನಗೊಂಡಿದ್ದು, ಹೊರಳವಾಡಿ ಗ್ರಾಮದಲ್ಲಿ ಕೊಳವೆ ಬಾವಿ ಕೊರೆಸಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗಿದೆ. ಸದರಿ ಅನುದಾನದಲ್ಲಿ ವೆಚ್ಚ ಮಾಡಿರುವ ಬಿಲ್ಲುಗಳನ್ನು ಗುತ್ತಿಗೆದಾರರಿಗೆ ಪಾವತಿಸಲು ಮಾಹಿತಿಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಿರುತ್ತಾರೆ. ಹೊರಳವಾಡಿ ಗ್ರಾಮದಲ್ಲಿ ನೀರಿನ ಕೊರತೆಯಿದ್ದು, ಸಾಮಾನ್ಯ ಸಭೆಯ ತಿರ್ಮಾನದಂತೆ ಹೊರಳವಾಡಿ ಗ್ರಾಮಕ್ಕೆ ಅದ್ಯತೆ ಮೇರೆಗೆ ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಉಳಿಕೆ ಅನುದಾನವನ್ನು ಹೊಸೂರು ಗ್ರಾಮಕ್ಕೆ ಬಳಕೆ ಮಾಡಿಕೊಳ್ಳಲು ನೀರು ಮತ್ತು ನೈರ್ಮಲ್ಯ ಇಲಾಖೆಗೆ ಪತ್ರದ ಮೂಲಕ ತಿಳಿಸಿರುತ್ತಾರೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

11. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–4 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.1ರ

ದಾಖಲಾತಿಯನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–3 ಮತ್ತು 4 ಇವರುಗಳ ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

12. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರುಗಳು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

13. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

14. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

15. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1:** ಆ.ಸ.ನೌ–1, 3 ಮತ್ತು 4 ರವರ ವಿರುದ್ಧ "ಸಕಾರಾತ್ಮಕವಾಗಿ" ಆ.ಸ.ನೌ–2 ಇವರ ವಿಚಾರಣೆಯನ್ನು ಸದರಿ ಆದೇಶ ಆಗುವವರೆಗೆ ತಡೆಹಿಡಿಯಬಹುದಾಗಿರುತ್ತದೆ (ಕಾರಣವನ್ನು ಕಂಡಿಕೆ 20ರಲ್ಲಿ ವಿವರಿಸಲಾಗಿದೆ).

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

16. ದೂರುದಾರರಾದ ಶ್ರೀ. ಹೆಚ್.ಎಂ ಮಲ್ಲೇಗೌಡ ಬಿನ್ ಮಹದೇವು, ಹೊರಳವಾಡಿ-ಹೊಸೂರು ಗ್ರಾಮ, ಕಸಬಾ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ ಇವರು ತಮ್ಮ ದೂರನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈಗಾಗಲೇ ಮೇಲ್ಕಂಡಂತೆ ಉಲ್ಲೇಖಿಸಲಾಗಿದೆ.

17. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ತಮ್ಮ ಮುಖ್ಯ ವಿಚಾರಣೆಯಲ್ಲಿ 2013-14ನೇ ಸಾಲಿನಲ್ಲಿ ಹೊರಳವಾಡಿ-ಹೊಸೂರು ಗ್ರಾಮಕ್ಕೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ 8 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆಯಾಗಿತ್ತು. ಆದರೆ, ಈ ಕಾಮಗಾರಿ ಇವರ ಊರಿನಲ್ಲಿ ಆಗಿರುವುದಿಲ್ಲ. ಆದ್ದರಿಂದ, ಇವರ ಊರಿನ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಮುಂದುವರೆದು, ತಾನು ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಿರು ನೀರು ಸರಬರಾಜು ಯೋಜನೆ, ನಂಜನಗೂಡು ಇವರಲ್ಲಿ ದೂರನ್ನು ನೀಡಿದ್ದು ಅವರು ಕಳೆದ ಸಾಲಿನಲ್ಲಿ ಇವರ ಊರಿಗೆ ಈ ಯೋಜನೆ ಅಡಿಯಲ್ಲಿ ಕಾಮಗಾರಿ ಆಗಿರುತ್ತದೆ ಎಂದು ದಾಖಲಾತಿಯನ್ನು ಕೊಟ್ಟಿರುತ್ತಾರೆ. ನಿ.ಪಿ.1 ದೂರು; ನಿ.ಪಿ.2 ಮತ್ತು 3 ಫಾರಂ ನಂ.1 ಮತ್ತು ಫಾರಂ.2; ಈ ಕಾಮಗಾರಿಗೆ ಸಂಬಂಧಪಟ್ಟಂತೆ ಒಟ್ಟು 14 ಪುಟಗಳ ದಾಖಲೆಗಳಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.4 ಅಂತಾ ಗುರುತಿಸಿಕೊಂಡಿರುತ್ತಾರೆ. ನಿ.ಪಿ.4ರಲ್ಲಿ 2014-15ನೇಯ NRDWP ಯೋಜನೆಯಲ್ಲಿ Annual Action Plan, Thagaduru Zilla Panchayath Constituency, Nanjangudu Taluk ಅಂತಾ ಇದ್ದು, ಅದರಲ್ಲಿ ಹೊರಳವಾಡಿ ಗ್ರಾಮಕ್ಕೆ ರೂ.8 ಲಕ್ಷ ಅನುದಾನ ಬಿಡುಗಡೆ ಆಗಿರುತ್ತದೆ ಅಂತಾ ಕಂಡುಬರುತ್ತದೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು ಇವರು ಆ.ಸ.ನೌ-1 ರವರಿಗೆ ಪತ್ರ ಬರೆದಿದ್ದು, ಅದರಲ್ಲಿ 2013-14ನೇ ಸಾಲಿನಲ್ಲಿ ಹೊರಳವಾಡಿ-ಹೊಸೂರು ಗ್ರಾಮದಲ್ಲಿ ಕೈಗೊಳ್ಳಲು ಮಂಜೂರಾದ ರೂ.8 ಲಕ್ಷ ಅಂದಾಜು ಮೊತ್ತದ ಕಿರು

ನೀರಿನ ಸರಬರಾಜು ಯೋಜನೆಗಳನ್ನು ಬಸವೇಶ್ವರ ನಗರ ಗ್ರಾಮಕ್ಕೆ ಕೈಗೊಳ್ಳಲಾಗಿರುತ್ತದೆ ಎಂದು ಹೊರಳವಾಡಿ–ಹೊಸೂರು ಗ್ರಾಮಸ್ಥರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ. ಹಾಗಾಗಿ, ಹೊರಳವಾಡಿ–ಹೊಸೂರು ಗ್ರಾಮಕ್ಕೆ ಮಂಜೂರಾದ ನೀರಿನ ಕ್ರಿಯಾ ಯೋಜನೆಯನ್ನು ಬಸವೇಶ್ವರ ನಗರದಲ್ಲಿ ಅನುಷ್ಠಾನಗೊಳಿಸಲು ಕಾರಣಗಳ ಬಗ್ಗೆ 3 ದಿನಗಳೊಳಗಾಗಿ ಉತ್ತರ ನೀಡಲು ಕೇಳಿಕೊಂಡಿರುತ್ತಾರೆ. ದೂರುದಾರರು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊರಳವಾಡಿ ಗ್ರಾಮ ಪಂಚಾಯತ್, ನಂಜನಗೂಡು ಇವರಿಗೆ ದಿನಾಂಕ: 23/09/2016 ರಂದು ಅಧ್ಯಕ್ಷರು, ಪಿ.ಡಿ.ಓ, ಹೊರಳವಾಡಿ ಗ್ರಾಮ ಪಂಚಾಯತ್, ನಂಜನಗೂಡು ಇವರು ಒಂದು ಪತ್ರವನ್ನು ಬರೆದು ಮೇಲ್ಕಂಡ ಕ್ರಿಯಾ ಯೋಜನೆಯ ಬಗ್ಗೆ ಹೊರಳವಾಡಿ–ಹೊಸೂರು ಗ್ರಾಮಕ್ಕೆ ಸೌಲಭ್ಯವು ದೊರಕದೇ ಇದ್ದು, ಇದರ ಹಸ್ತಾಂತರ ಪ್ರತಿ ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಲು ಕೇಳಿದ್ದು, ಅದಕ್ಕೆ ಆ.ಸ.ನೌ–1 ರವರು ಈ ಬಗ್ಗೆ ತಮ್ಮ ಗ್ರಾಮ ಪಂಚಾಯಿತಿಯಲ್ಲಿ ಕಡತಗಳನ್ನು ಪರಿಶೀಲಿಸಲಾಗಿ ಹಸ್ತಾಂತರ ಪತ್ರ ಹಾಗೂ ಇತರೆ ಮೂಲ ದಾಖಲಾತಿಗಳು ಲಭ್ಯವಿರುವುದಿಲ್ಲ ಅಂತಾ ತಿಳಿಸಿರುತ್ತಾರೆ. ಆ.ಸ.ನೌ ಪರ ವಕೀಲರು ಪಾಟಿಸವಾಲು ಮಾಡಿದಾಗ ಈ ಕಾಮಗಾರಿಯನ್ನು ಹೊರಳವಾಡಿ–ಹೊಸೂರು ಗ್ರಾಮದಲ್ಲಿ ಆಗಿದ್ದು, ಬಸವೇಶ್ವರ ಗ್ರಾಮದಲ್ಲಿ ಆಗಿರುವುದಿಲ್ಲ ಅಂತಾ ಯಾವುದೇ ಸಲಹೆಯನ್ನು ನೀಡಿರುವುದಿಲ್ಲ. ಇಷ್ಟು ಹೊರತಾಗಿ ಬೇರೆ ಯಾವುದೇ ವಿಷಯದ ಬಗ್ಗೆ ಪಾಟಿಸವಾಲು ಮಾಡಿರುವುದಿಲ್ಲ.

18. ಈ ವಿಚಾರಣೆಯಲ್ಲಿ ಆ.ಸ.ನೌ–4 ಇವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಅವರು ತಮ್ಮ ಸಾಕ್ಷಿಯ ಪೂರಕವಾಗಿ ಪ್ರಮಾಣ ಪತ್ರದ ಮೂಲಕ ತಮ್ಮ ಮುಖ್ಯ ವಿಚಾರಣೆಯನ್ನು ಸಲ್ಲಿಸಿದ್ದು, ಅದರಲ್ಲಿ ತನ್ನ ರಕ್ಷಣಾ ಹೇಳಿಕೆಯಲ್ಲಿ ಹೇಳಿದ ವಿಷಯವನ್ನೇ ಹೇಳಿರುತ್ತಾರೆ. ಇವರು ದಿನಾಂಕ: 13/08/2014 ರಂದು ಇವರ ಪಂಚಾಯಿತಿ ಸಭೆಯಲ್ಲಿ ಜರುಗಿದ ಠರಾವಿನ ನಕಲನ್ನು ಸಲ್ಲಿಸಿರುತ್ತಾರೆ. ಸದರಿ ಠರಾವಿನಲ್ಲಿ NRDWP ಯೋಜನೆ ಅಡಿಯಲ್ಲಿ ಮಂಜೂರಾದ ಅನುದಾನದ ಬಗ್ಗೆ ನಮೂದು ಇದ್ದು, ಸದರಿ ಅನುದಾನದಲ್ಲಿ (ರೂ.8 ಲಕ್ಷ) ಆದ್ಯತೆಯ ಮೇರೆಗೆ ನೀರು ಸರಬರಾಜು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಉಳಿಕೆ ಇರುವ ಅನುದಾನದಲ್ಲಿ

ಹೊರಳವಾಡಿ–ಹೊಸೂರು ಗ್ರಾಮದ ನೀರು ಸರಬರಾಜು ಕಾಮಗಾರಿಯನ್ನು ಅನುಷ್ಠಾನಗೊಳಿಸಲು, ಕ್ರಮವಹಿಸಲು ಹಾಗೂ ಅನುದಾನದ ಕೊರತೆ ಕಂಡುಬಂದಲ್ಲಿ ಮುಂದಿನ ಸಾಲಿನಲ್ಲಿ ಆದ್ಯತೆ ಮೇರೆಗೆ ಇತರೆ ಯೋಜನೆಗಳಲ್ಲಿ ಲಭ್ಯವಿರುವ ಅನುದಾನದಲ್ಲಿ, ಪಿ.ಆರ್.ಇ.ಡಿ ಇಲಾಖೆಯಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು ಅಂತಾ ನಮೂದು ಇರುತ್ತದೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಇವರ ಪಾಟಸವಾಲಿನಲ್ಲಿ ಮಂಡನಾಧಿಕಾರಿಗಳು ಯಾವುದೇ ಯೋಜನೆಯ ಹಣ ಮಂಜೂರಾದರೇ ಅದನ್ನು ಇನ್ನೊಂದು ಯೋಜನೆಗೆ ವರ್ಗಾಯಿಸಲು ಬರುವುದಿಲ್ಲ ಎನ್ನುವುದಕ್ಕೆ ಸಾಕ್ಷಿಯು ತಾನು ಈ ಯೋಜನೆ ಅಡಿಯಲ್ಲಿ ಬೇರೊಂದು ಕಾಮಗಾರಿಗಾಗಿ ವರ್ಗಾಯಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ.

19. ಈ ವಿಚಾರಣೆಯಲ್ಲಿ ಗಮನಿಸಬೇಕಾದ ವಿಷಯವೇನೆಂದರೆ, ದೂರುದಾರರ ಪ್ರಕಾರ ಹೊರಳವಾಡಿ–ಹೊಸೂರು ಗ್ರಾಮಕ್ಕೆ ಮಂಜೂರಾದ ಅನುದಾನವನ್ನು ಆ ಗ್ರಾಮಕ್ಕೆ ಉಪಯೋಗಿಸದೇ ಬಸವೇಶ್ವರ ಬಡಾವಣೆಗೆ ಉಪಯೋಗಿಸಿರುತ್ತಾರೆ ಅಂತಾ ವಾದ ಇರುತ್ತದೆ. ಆ.ಸ.ನೌ–1 ಇವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ತಾನು ಹೊರಳವಾಡಿ ಗ್ರಾಮಕ್ಕೆ ಉಪಯೋಗಿಸಿಕೊಂಡಿದ್ದು, ಬಸವೇಶ್ವರ ನಗರಕ್ಕೆ ಉಪಯೋಗಿಸಿಕೊಂಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ತಮ್ಮ ಹೇಳಿಕೆಯನ್ನು ಸಮರ್ಥಿಸಲು ಸಾಕಷ್ಟು ಬಾರಿ ಅವಕಾಶ ನೀಡಿದ್ದಾಗ್ಯೂ ಸಹ ತಮ್ಮ ಸಾಕ್ಷಿಯನ್ನು ಮಾಡಿರುವುದಿಲ್ಲ ಮತ್ತು ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ಆ.ಸ.ನೌ–3 ಇವರೂ ಸಹ ಆ.ಸ.ನೌ–1 ರಂತಯೇ ತಮ್ಮ ರಕ್ಷಣಾ ಹೇಳಿಯಲ್ಲಿ ಹೇಳಿದ್ದು, ಆದರೆ ಅವರೂ ಸಹ ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ ಮತ್ತು ಯಾವುದೇ ದಾಖಲಾತಿಯನ್ನು ಸಹ ನಿಶಾನೆಗೆ ಒಳಪಡಿಸಿಕೊಂಡಿರುವುದಿಲ್ಲ. ಆ.ಸ.ನೌ–4 ಇವರ ಪ್ರಕಾರ ಅನುದಾನವನ್ನು ಮಂಜೂರಾದ ನಂತರ ಈ ಬಗ್ಗೆ ಗ್ರಾಮ ಪಂಚಾಯಿತಿಯಲ್ಲಿ ಠರಾವು ಮಾಡಿ ಅನುಮೋದನೆ ಪಡೆದುಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು ಇವರಿಗೆ ತಿಳಿಸಿದ್ದು ಇರುತ್ತದೆ. ಆದರೆ, ಆ.ಸ.ನೌ–1 ಮತ್ತು 3

ಇವರು ಸದರಿ ಅನುದಾನವನ್ನು ಹೊರಳವಾಡಿ ಗ್ರಾಮದಲ್ಲಿಯೇ ಕೈಗೆತ್ತಿಕೊಂಡಿರುತ್ತಾರೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಯನ್ನು ಗುರುತಿಸಿಕೊಂಡಿರುವುದಿಲ್ಲ. ಆ.ಸ.ನೌ–4 ಇವರು ತಮ್ಮ ಆಕ್ಷೇಪಣೆಯಲ್ಲಿ 2013–14ನೇ ಸಾಲಿನಲ್ಲಿ ಹೊರಳವಾಡಿ ಹೊಸೂರು ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆ ಇದ್ದರಿಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್, ತಾಂತ್ರಿಕ ಉಪವಿಭಾಗ ರವರು ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಸದರಿ ಯೋಜನೆಯ ನೀರನ್ನು ಬಸವೇಶ್ವರ ನಗರ ಗ್ರಾಮಕ್ಕೆ ಪೂರೈಸಲಾಗಿದೆ. ಯೋಜನೆಯ ಅನುಷ್ಠಾನದ ಬಗ್ಗೆ ಆ ಸಮಯದಲ್ಲಿ ದೂರುದಾರರು ಗ್ರಾಮ ಪಂಚಾಯತ್‌ಗೆ ಯಾವುದೇ ದೂರು ನೀಡದ ಕಾರಣ ಗ್ರಾಮ ಪಂಚಾಯತ್‌ನಿಂದ ಆಕ್ಷೇಪಣೆ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಈ ಅಂಶವನ್ನು ರುಜುವಾತುಪಡಿಸಿರುತ್ತಾರೆ.

20. **ಈ ಪ್ರಕರಣದಲ್ಲಿ ಆ.ಸ.ನೌ–2 ಶ್ರೀ. ರಾಮಕೃಷ್ಣ, ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು ರವರ ವಿರುದ್ಧ ಇದೇ ಮೇಲ್ಕಂಡ ಆರೋಪಣೆಗಳಿಗೆ ಸಂಬಂಧಪಟ್ಟಂತೆ ಕೆ.ಎಸ್.ಎ.ಟಿ, ಬೆಂಗಳೂರು ಅಪ್ಲಿಕೇಷನ್ ನಂ.1328/2020 ದಾಖಲಿಸಿದ್ದು, ಸದರಿ ಆದೇಶವು ಮಂಜೂರಾಗಿ ಇವರ ವಿರುದ್ಧ ಮಾಡಿದ ದೋಷಾರೋಪಣೆಯನ್ನು ರದ್ದುಗೊಳಿಸಿರುತ್ತಾರೆ. ಸದರಿ ಆದೇಶದ ಆಧಾರದ ಮೇಲೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 60 ಜಿಪ 2018, ಬೆಂಗಳೂರು, ದಿನಾಂಕ: 09/07/2021 ರಂತೆ** ***"ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ: 1328/2020 ರಲ್ಲಿ ದಿನಾಂಕ: 07/07/2020 ರಂದು ನೀಡಿರುವ ಆದೇಶದ ಹಿನ್ನಲೆಯಲ್ಲಿ ಶ್ರೀ. ರಾಮಕೃಷ್ಣಪ್ಪ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 92 ಇಎನ್‌ಕ್ಯೂ 2018, ದಿ: 16/11/2018 ರಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದ ಆದೇಶವನ್ನು ಶ್ರೀ. ರಾಮಕೃಷ್ಣಪ್ಪ, ನಿವೃತ್ತ ಸಹಾಯಕ***

*ಕಾರ್ಯಪಾಲಕ ಇಂಜಿನಿಯರ್ ಇವರಿಗೆ ಸೀಮಿತವಾಗಿ ಈ ಪ್ರಕರಣವನ್ನು ಈ ಹಂತಕ್ಕೆ ಮುಕ್ತಾಯಗೊಳಿಸಿ ಆದೇಶಿಸಿದೆ"* ಎಂದು ತಿಳಿಸಿರುತ್ತಾರೆ.

ಆದರೆ, ಈ ಸಂಸ್ಥೆಯಿಂದ ಮಾನ್ಯ ಕೆ.ಎಸ್.ಎ.ಟಿ, ಬೆಂಗಳೂರು ಅಪ್ಲಿಕೇಷನ್ ನಂ.1328/2020ರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ನಲ್ಲಿ ಡಬ್ಲ್ಯೂ.ಪಿ ನಂ.1718/2021 ದಾಖಲಾಗಿದ್ದು ಇರುತ್ತದೆ ಮತ್ತು ಅದು ಇಲ್ಲಿಯವರೆಗೆ ಜಾಲ್ತಿಯಲ್ಲಿರುತ್ತದೆ.

21. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1, 3 ಮತ್ತು 4 ರವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸಿರುತ್ತದೆ ಎಂದು ನಿರ್ಣಯಕ್ಕೆ ಬಂದು ಅಂಶ–1ನ್ನು ಆ.ಸ.ನೌ–1, 3 ಮತ್ತು 4 ರವರ ವಿರುದ್ಧ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

22. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಶಿಸ್ತು ಪ್ರಾಧಿಕಾರದವರು ಆಪಾದಿತ ಆ.ಸ.ನೌ – **ಆ.ಸ.ನೌ–1 ಶ್ರೀ. ಶ್ರೀಧರ ಚೂರಿ,** ಅಂದಿನ ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು; **ಆ.ಸ.ನೌ–3 ಶ್ರೀ. ಎಂ.ಕೆ ಭಾಸ್ಕರ್,** ಅಂದಿನ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು ಮತ್ತು **ಆ.ಸ.ನೌ–4 ಶ್ರೀ. ರಾಮಚಂದ್ರಪ್ಪ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊರಳಾಡಿ ಗ್ರಾಮ ಪಂಚಾಯತಿ, ನಂಜನಗೂಡು ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿರುತ್ತದೆ.

**ಆ.ಸ.ನೌ–2 ಶ್ರೀ. ರಾಮಕೃಷ್ಣಪ್ಪ,** ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನಂಜನಗೂಡು (ನಿವೃತ್ತ) ಇವರ ವಿಚಾರಣೆಯನ್ನು ಸದರಿ ಆದೇಶ ಆಗುವವರೆಗೆ ತಡೆಹಿಡಿಯಬಹುದಾಗಿರುತ್ತದೆ (ಕಾರಣವನ್ನು ಕಂಡಿಕೆ 20ರಲ್ಲಿ ವಿವರಿಸಲಾಗಿದೆ).

**ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 31/07/2037; ಆ.ಸ.ನೌ–3 ರವರ ನಿವೃತ್ತಿ ದಿನಾಂಕ: 28/02/2020 ಮತ್ತು ಆ.ಸ.ನೌ–4 ರವರ ನಿವೃತ್ತಿ ದಿನಾಂಕ: 31/07/2039 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Sd/- 13/4

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Mallegowda H.M S/o Mahadeva, Horalawadi, Hosuru, Nanjangudu Taluk, Mysuru District. |
| 2 | **Documents marked on behalf of the Disciplinary Authority Ex.P-1 to Ex.P-4** | |
| | **Ex.P.1 & 1(a)** | Complaint given to this institution dtd: 05/10/2015 with Signature. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Documents pertaining to Ex.P.1. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Ramchandra S/o Late Chikkanna, PDO, Thayuru Gram Panchayath, Nanjangudu Taluk, Mysuru. |
| 4 | **Documents marked on behalf of the DGOs through the complainant** | |
| | **Ex.D.1** | Meeting proceedings held in Horalawadi Gram Panchayath on 13/08/2014. |

Dated this the 13th April, 2022

Sd/- 13/4

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.